ಮೈಸೂರು ಸೇವಿಂಗ್ಸ್ ಬ್ಯಾಂಕಿನಿಂದ ಬರತಕ್ಕ 186—4—9 ಸಾಲವನ್ನು ವಸೂಲ್ ಮಾಡುವದಕ್ಕೆ ಸಃ 1860ನೇ ಇಸವಿ 27ನೇ ಆಕ್ಟು ಮೇರಗೆ ಸರ್ಟಿಫಿಕೇಟ್ ಬ್ಯೆ ಈ ಕೋರ್ಟಿಗೆ ಖಾಯಿಮ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರವಾದ ವಕ್ಕೀಲರ ತಿಮ್ಮಪ್ಪನ ಅರ್ಜಿಯನ್ನು ಸಃ 1896ನೇ ಇಸವಿ ಜುಲ್ಯೆ ತಿಂಗಳ ತಾರೀಖು 24ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವಕ್ಕೀಲರ ತಿನಪ್ಪನ ಆಸ್ತಿಗೆ ಹಕ್ಕುದಾರರಾದ ವಿಸಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸಃ 1895—96ನೇ ಇಸವಿ Mill ಅರ್ಜಿ ನಂಬರ್ 320.

ಮೃತಪಟ್ಟ ಮಾಳಗೊಂಡನಹಳ್ಳಿ ರಂಗರಾಮನ ಆಸ್ತಿ ವಿಷಯದಲ್ಲಿ.—

ಅರ್ಜೀದಾರಳು ಕಮಲಾಬಾಯಿ, ಮೃತಪಟ್ಟ ಸದರೀ ರಂಗರಾಮನಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇರೆ ಚಿಕ್ಕಮಗಳೂರು ಸ್ಥಳದ ಕಮಲಾಬಾಯಿಯು, ಚಿಕ್ಕಮಗಳೂರು ಮಾಸನ್ಸನಾಗಿ ಮೃತಪಟ್ಟ ರಂಗರಾಮನ ಬೆಂದಗಿ ಬಗ್ಯಾಗಿ ಬರತಕ್ಕ 1,000 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಗೆ ಸರ್ಟಿಫಿಕೇಟ್ ಬ್ಯೆ ಈ ಕೋರ್ಟಿಗೆ ಖಾಯಿಮ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಕಮಲಾಬಾಯಿಯ ಅರ್ಜಿಯನ್ನು 1896ನೇ ಇಸವಿ ಜುಲ್ಯೆ ತಿಂಗಳ ತಾರೀಖು 24ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಂಗರಾಮನ ಆಸ್ತಿಗೆ ಹಕ್ಕುದಾರರಾದ ವಿಸಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿಧೆ.

ಸಃ 1896ನೇ ಇಸವಿ ಮೇ ತಿಂಗಳ 8ನೇ ತಾರೀಖಿನಲ್ಲಿ ಕೋರ್ಟ್ ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಬಿ. ತಿರುಮಲಾಚಾರ್,
ಡಿಸ್ಟ್ರಿಕ್ಟ್ ಜಡ್ಜ್.

ಕಡೂರು ಡಿಸ್ಟ್ರಿಕ್ಟು.

ಇಸ್ತಿಹಾರ್‌ನಾಮೆ.

ತಾರೀಖು 10ನೇ ಮೇ 1896ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಇದರಡಿ ನಮೂದಿಸಿರುವ ಜವುಬ್ದಿನ ಮತ್ತು ಬೊಂಬು ಮತ್ತು ಪನಸರೆ ಸಾಮಾನ್ ಕಡೂರು ಡಿಸ್ಟ್ರಿಕ್ಟು ಡಿಪೋಗಳಲ್ಲಿ ಅವುಗಳ ಬಾಬ್ತಿದಲ್ಲಿ ಕಾಣಿಸಿರುವ ತಾರೀಖುಗಳಲ್ಲಿ ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರು ಮುಕ್ತು ಡೆಪ್ಯೂಟಿ ಕಮ್ಮಿಷನರ್ ಯಾ ಅವರಿಂದ ನೇಮಿಸಲ್ಪಡುವ ಇತರ ಆಫಿಸರುಗಳಿಂದ ಹರಾಜು ಮಾಡಿಸಲ್ಪಡುವದು.

ಸಾಮಾನುಗಳ ತಪ್ಸೀಲ್.	ಲಾಕ್ಕುವಳ್ಳಿ ಡಿಪೋ.			ತರೀಕರೆ ಡಿಪೋ.			ಪರಾ.
	ಅದದು.	ಸಲೆ ಆ ಡಿ.	ಹರಾಜು ತಾರೀಖು.	ಅದದು.	ಸಲೆ ಆಡಿ.	ಹರಾಜು ತಾರೀಖು.	
ಸಾಗುವಾನಿ ನಾಟು ..	480	10,500	1896ನೇ ಇಸವಿ ಜೂನ್ ತಾರೀಖು 16ನೇ ತಾರೀಖು.	42	639	1896ನೇ ಇಸವಿ ಜೂನ್ 13ನೇ ತಾರೀಖು.	ಕಡ್ಡಿ ಕಡಮೆ.
ರಿಜರ್ವಡು ನಾಟು ..	250	6,500		13	285		
ಆ॥ ರಿಜರ್ವಡು ನಾಟು ..	120	3,000		17	388		
ಸಾಗುವಾನಿ ಬೆಲಗು ..	150	1,200		480	1,510		
ಸಾಗುವಾನಿ ತುಂಡುಗಳು ..	40	390		680	4,950		
ಕಾಡುಜಾತಿ ಬೆಲಗು ..	25	230		..	..		
ಸಾಗುವಾನಿ ಹುರಿ ತುಂಡುಗಳು ..	..	..		2,968	..		
ಕಿರಿವಿದರುಗಳು ..	..	..		10,000	..		
ಆಳ್ದೀಕಾಯಿ ..	40 ಮಣ	..		..	..		

ನಾಟಾಗಳ ತಪಸೀಲ್.	ಕಡೂರು ಡಿಪೋ.			ಚಿಕ್ಕಮಗಳೂರು ಡಿಪೋ.			ಪರಾ.
	ಅದದು.	ಸಲೆ ಅಡಿ.	ಹರಾಜು ತಾರೀಖು.	ಅದದು.	ಸಲೆ ಅಡಿ.	ಹರಾಜು ತಾರೀಖು.	
ಸಾಗುವಾನಿ ನಾಟಾ ..	24	783	1896ನೇ ಇಸವಿ ಜೂ॥ 25ನೇ ತಾರೀಖು.	70	1,358	1896ನೇ ಇಸವಿ ಜೂ॥ 27ನೇ ತಾರೀಖು.	ಹೆಚ್ಚಿನ ಕಡಮೆ.
ರಿಜ್ವಾಡು ನಾಟಾ ..	65	1,850		11	345		
ಆ॥ ರಿಜ್ವಾಡು ನಾಟಾ ..	16	470		11	320		
ಸಾಗುವಾನಿ ಬೆಲಗು ..	367	1,113		1	12		
ಡಿಪೋ ತುಂಡುಗಳು ..	36	380		..	..		
ಕಾಡುಜಾತಿ ಬೆಲಗು ..	..	..		6	25		
ಸಾಗುವಾನಿ ತುದಿ ತುಂಡುಗಳು.	..	..		..	..		
ಕಿರಬಿದರು ..	1,000	..		1,200	..		
ಆಳಲೇಕಾಯಿ ..	..	..		145 ಮಣ	..		

ಹರಾಜು ಷರತ್ತು.—25—4—95ನೇ ಮತ್ತು 15ನೇ ನಂಬರ ಮೈಸೂರ ಗೆಜೆಟ್ಟುನಲ್ಲಿ ಛಾಪಿಸಿ ಆಗಿರುವ 15—3—95ನೇ 15229—155—92ನೇ ನಂಬರ ನೋಟಿಫಿಕೇಷನ್ ನೋಡತಕ್ಕದ್ದು. ಮತ್ತು ಸದರಿ ನೋಟಿಫಿಕೇಷನ್ ಹರಾಜು ಕಾಲದಲ್ಲಿ ಮೋದಲ್ಗೊಡಲಾಗುವದು.

ಬಿ. ಹೀರಾಕಿಂಗ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್.

ಸದರ್ನ್ ಮರಾಟಾ ರೆಯಿಲ್ವೆ.
(ಮೈಸೂರು ಸ್ಟೇಟ್ ರೆಯಿಲ್ವೆ)
ನೋಟಿಸ್.

ನಂಜನಗೂಡು, ಮೈಸೂರು ಮತ್ತು ಪಶ್ಚಿಮ ವಾಹಿನೀ ರೆಯಿಲ್ವೆ ಸ್ಟೇಷನ್‌ಗಳಲ್ಲಿ ರೆಯಿಲ್ವೆಗೆ ಸಾಮಾನುಗಳನ್ನು ಭರ್ತೀ ಮಾಡುವ ಸ್ಥಳದಲ್ಲಿ ಬಿದ್ದಿರುವಂಥ ನಾಟಾಗಳ ವಾಲೀಕರಾದ ಯೆಲ್ಲರಿಗೂ ಈ ಮೂಲಕ ತಿಳಿಯಪಡಿಸುವದೇನಂದರೆ:—

ಸದರಿಯವರುಗಳು ತಾವೇ ಖುದ್ದಾಗಿಮತ್ತಾಗಲಿ ಅಥವಾ ಮುಖ್ತಾರೀಕರ ಮೂಲಕವಾಗಿ ಯಾಗಲಿ ಈ 96ನೇ ಇಸವಿ ಜೂ॥ 21ನೇ ತಾರೀಖಿನ ತರುವ್ವಾಯಿ ಆಯಾಯ ಸ್ಟೇಷನ್‌ಗಳಿಗೆ ಹಾಜರಾಗಿ, ತಮ್ಮ ತಮ್ಮ ನಾಟಾಗಳನ್ನು ಗುರ್ತಿಸಿ, ರೆಯಿಲ್ವೇ ಮುದ್ರಾಂಕ್ಷ ಅವುಗಳನ್ನು ಸಾಗಿಸಲಿಕ್ಕೆ ಪ್ರತಿ ಒಂದು ಭರ್ತೀ ವಾಗಿನಿಗೂ ಒಂದೊಂದು ಫಾರ್ವರ್ಡಿಂಗ್ ನೋಟಿನಂತೆ ಕೊಡಿಸಿ ಹೋದ ಪಕ್ಷದಲ್ಲಿ, ಮೇಲೆ ನಮೂದಿಸೋಣಾದ ತಾರೀಖು ಮತ್ತು ಆ ಅನಂತರದಲ್ಲಿ—ಸದರಿ ಭರ್ತೀ ಮಾಡುವ ಸ್ಥಳದಲ್ಲಿ ಬಿದ್ದಿವಂಥಾ ರವಾನೆ ಬಗ್ಗೆ ಬಿಪ್ಪಿಸಲ್ಪಡದೆ ಇರುವಂಥ ಎಲ್ಲಾ ನಾಟಾಗಳ ವಿಷಯದಲ್ಲಿಯೂ—ದರ ನಾಟಾ 1ಕ್ಕೆ ದರ ರೋಜು 1ಕ್ಕೆ 2 ಆಣೆಯಂತೆ ಸ್ಥಳ (ಬಾಡಿಗೆ ಯಾನೆ) ತೀರ್ವೆಯು ಚಾರ್ಜು ಮಾಡಲ್ಪಡುವದು.

ಎಲ್ಲಾ ಫಾರ್ವಡಿಂಗ್ ನೋಟುಗಳಲ್ಲಿಯೂ ನಾಟಾಗಳ ನಂಬರ ಮತ್ತು ಅವುಗಳನ್ನು ಗುರ್ತಿಸಬಹುದಾದಂಥಾ ಗುರ್ತುಗಳು ಸಹ ವಿವರಿಸಬೇಕು.

ಮೇಲೆ ನಮೂದಿಸಿರುವ ತಾರೀಖಿನ ಲಾಗಾಯತು ರೈಲ್ವೇ ನಿವೇಶನಗಳಲ್ಲಿ ಹಾಲೀ ಜಮಾಯಿಸಿರುವಂಥಾ ಆ ಅನಂತರದಲ್ಲಿ ಜಮಾಯಿಸುವಂಥ ಎಲ್ಲಾ ನಾಟಾಗಳ ಮೇಲೆಯೂ ಅವುಗಳನ್ನು ಮೇಲೆ ವಿಧಾಯಕ ಪಡಿಸಿರುವಂತೆ ರೈಲ್ವೇ ಮೂಲಕ ಟ್ರೈಯಲಿಕ್ಕೆ ಬಿಪ್ಪಿಸದೆ ಹೋದ ಪಕ್ಷದಲ್ಲಿ, ದರ ನಾಟಾ 1ಕ್ಕೆ ತಿಂಗಳು 1ಕ್ಕೆ ನಾಲ್ಕಾಣೆ ಮೇರೆ ಸ್ಥಳ (ಬಾಡಿಗೆ ಯಾನೆ) ತೀರ್ವೆಯು ಚಾರ್ಜು ಮಾಡಲ್ಪಡುತ್ತೆಂಬದನ್ನು ಸಹ ತಿಳಿಸಲ್ಪಟ್ಟಿದೆ.

ಬೆಂಗಳೂರು ಸಿಟಿ,
ತಾರೀಖು 30ನೇ ಮೇ 1896.

ಟಿ. ಜೆ. ಮಕ್ಲೊಯ್ಡ್,
ಡಿಸ್ಟ್ರಿಕ್ಟ್ ಟ್ರಾಫಿಕ್ ಸೂಪರಿಂಟೆಂಡೆಂಟ್.